ಹೆಣ್ಣಾಳುಗಳನ್ನ ಬಲಾತ್ಕಾರವಾಗಿ ಅನೈತಿಕ ಸಂಬಂಧಕ್ಕೆ ಬಳಸ್ಕೋತಾನೆ ಅಂತ."

"ಹಾಗಿದ್ರೆ ಮುತ್ತಪ್ಪ ಸಂಪಂಗಿಗೆ ಮನೆ ಯಾಕೆ ಕೊಡಿಸ್ದ?" ನಾನು ಪ್ರಶ್ನೆ ಹಾಕಿದೆ.

"ಬಹುಶಃ ಸಂಪಂಗಿ ಕೊಡೋ ದುಡ್ಡಿನಾಸೆಯಿಂದಾಗಿ! ಅವ್ನು ಮೋಸ ಮಾಡಿದ ಮೇಲೆ ಓಡಿಸ್ಬೇಕು ಅಂತ ಶುರು ಮಾಡಿದಾನೋ ಏನೋ? ನಮ್ಮ ಯಜಮಾನರೂ ಯಾಕೋ ಮುತ್ತಪ್ಪನಿಗೆ ಹೆದರುತ್ತಾರೆ. ಅವ್ರಿಗೆ ನಾನು ಇದೆಲ್ಲಾ ಹೇಳಿದ್ರೂ ಅವ್ರು ಏನೂ ಮಾತಾಡಲಿಲ್ಲ. ಅವ್ರು ಮುತ್ತಪ್ಪನಿಗೆ ಯಾವತ್ತೂ ವಿರೋಧ ಹೇಳೋದಿಲ್ಲ."

"ನಿಮ್ಮ ಯಜಮಾನ್ರಿಗೆ ಹೆಂಡ್ತಿ, ಮಕ್ಳು ಇಲ್ವೆ?"

"ಹೆಂಡ್ತಿ ತೀರಿ ಹೋಗಿದಾರೆ. ಮಗ ವಿದೇಶದಲ್ಲಿದ್ದಾನಂತೆ. ನಾವು ನೋಡಿಲ್ಲ. ಯಜಮಾನರ ಅಣ್ಣ ಒಬ್ಬರು ಕೆರೆಗೆ ಬಿದ್ದು ತೀರಿಕೊಂಡ್ರು ಒಂದು ವರ್ಷದ ಹಿಂದೆ. ಅವ್ರಿಗೆ ಕುಡಿತದ ಅಭ್ಯಾಸವಿತ್ತು. ಕುಡಿದು ಕೆರೆಗೆ ಜಾರಿ ಬಿದ್ದರು ಅಂತಾರೆ. ಅದನ್ನ ಕೊಲೆ ಅಂತ್ಲೂ ಜನ ಆಡ್ಕೋತಾರೆ. ಅವ್ರ ಹೆಂಡ್ತಿ, ಮಕ್ಳು ಎಲ್ಲಿದ್ದಾರೆ ಅಂತ ಗೊತ್ತಿಲ್ಲ. ಇಡೀ ಎಸ್ಟೇಟು ಯಜಮಾನರಿಗೆ ಹಾಗಾಗಿ ಸಿಕ್ತು."

"ಸಂಪಂಗಿ ಎಂತಹ ಮನುಷ್ಯ?" ನನ್ನ ಪ್ರಶ್ನೆಗೆ ಬೊಳ್ಳಮ್ಮ ತುಟಿ ಬಿಚ್ಚಿದಳು,

"ಬಹಳ ವಿಚಿತ್ರ ಆಸಾಮಿ. ಯಾವಾಗಲೂ ಭೀತಿಯಿಂದ ಇದ್ದಂತೆ ಇರುತ್ತಾನೆ. ಆತನಿಗೆ ನಾವು ಊಟ ಕೂಡಾ..."

ಬೊಳ್ಳಮ್ಮ ಹೇಳುತ್ತಿದ್ದಂತೆ ಕರಮಚಂದ ಚಕ್ಕನೆ ಎದ್ದು ಹೊರಗೋಡಿದ. ಆಕೆ ಕ್ಷಣ ತಡೆದು ಮಾತು ಮುಂದರಿಸಿದಳು,

"ಊಟ ಕೂಡಾ ಕಿಟಕಿಯ ಮೂಲಕವೇ ಕೊಟ್ಟು ಹಿಂದೆ ನೋಡದೇ ಸೀದಾ ಬರಬೇಕು. ಊಟವಾದ ನಂತ್ರ ತಟ್ಟೆನ ಕಿಟಕಿಯ ಹೊರಗಡೆ ಇಡ್ತಾನೆ. ಆತ ಕಾಣೋಕೆ ಸಿಕ್ತಿರಲಿಲ್ಲ. ಒಂದೆರಡು ಬಾರಿ ಪಕ್ಕದ ಕಾಡಿನಲ್ಲಿ ಆತನನ್ನು ನೋಡಿದ್ದೆ. ರಾತ್ರಿ ಆತ ದೀಪ ಉರಿಸುವುದೇ ಕಮ್ಮಿ. ಆದ್ರೆ ಕೆಲವು ದಿನಗಳಿಂದ ಆತ ಮನೇಲೇ ಇರ್ತಿರಲಿಲ್ಲ. ಊಟ ಇಟ್ಟು ಮತ್ತೆ ವಾಪಸು ತರೋದು ಆಯ್ತು. ಅವ್ನು ಯಾವಾಗ್ಲೂ ಎದುರಿನ ಬಾಗಿಲಿಗೆ ಬೀಗ ಹಾಕಿಯೇ ಇರ್ತಿದ್ದ. ಹೊರಗೆ ಹೋಗಲು ಹಿಂದಿನ ಬಾಗ್ಲು ಬಳಸ್ತಿದ್ದಿರಬೇಕು." ಏಕಾಏಕಿ ದನಿ ತಗ್ಗಿಸಿದ ಬೊಳ್ಳಮ್ಮ ಪಿಸುಗುಟ್ಟುವಂತೆ ಹೇಳಿದಳು,

"ನಿನ್ನೆ ರಾತ್ರಿ ಸುಮಾರು ಒಂದು ಗಂಟೆಗೆ ಮುತ್ತಪ್ಪ ಟಾರ್ಚ್ ಬೆಳಕು ಹಾಕಿಕೊಂಡು ಸಂಪಂಗಿಯ ಮನೆಯತ್ತ ಹೋಗಿದ್ದನ್ನು ಕಂಡೆ."

ಬೊಳ್ಳಮ್ಮ ಮಾತು ಮುಗಿಸುವಾಗ ಕರಮಚಂದ ವಾಪಸು ಬಂದ. ಆಗ ಆತನ ಮುಖದಲ್ಲಿ ವಿಲಕ್ಷಣ ಕಾಂತಿಯಿತ್ತು. ಏನೋ ಮಹತ್ತರವಾದ ಕೊಂಡಿ ಆತನಿಗೆ ಸಿಕ್ಕಿರಬೇಕೆಂದು ನಾನು ತರ್ಕಿಸಿದೆ.

"ಸ್ವಲ್ಪ ದಿನಗಳ ಅವಕಾಶ ಕೊಡಿ, ಹೊನ್ನರಾಜು. ಒಡೆಯದ ಲಕೋಟೆಗೆ ಪರಿಹಾರ ಹುಡುಕೋಣ."

ಹೊನ್ನರಾಜುವಿಗೆ ಆಶ್ವಾಸನೆ ನೀಡಿ ನಾವು ಅಲ್ಲಿಂದ ಹೊರಡುವಾಗ ಸಮಯ ಏಳು ದಾಟಿತ್ತು.

★★★

ಮರುದಿನ ಬೆಳಿಗ್ಗೆಯಿಡೀ ಕರಮಚಂದ ಆ ಲಕೋಟೆಯೊಂದಿಗೆ ಬಿಜಿಯಾಗಿದ್ದ. ಅದನ್ನು ವಿವಿಧ